ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 17th July, 1980/Ashada 26, 1902. S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Incomplete Godowns in Chamarajnagar Taluk

252 SRI M. C. BASAPPA (Chamarajanagar).—Will the Minister for Co-operation be pleased to state:—

(a) the number of incomplete godowns as on 1st April 1979 in Chamarajanagar Taluk:

(b) the efforts by the Government to complete them early;

(c) the number of godowns completed as on 1st February 1980?

SRI A. B. JAKANUR (Minister for Co-operation).—

(a) 8 Godowns.

(b) Additional financial assistance from the CADA and from the District Plan schemes is being given enabling the institutions to complete the incomplete godowns.

(c) 19 Godowns.

†ಶ್ರೀ ಎಂ. ಸಿ. ಬಸಪ್ಪ.—ಚಾಮರಾಜನಗರ ತಾಲ್ಲೂಕಿನಲ್ಲಿ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುತ್ತಿರುವ ಉಗ್ರಾಣಗಳ ಸಂಖ್ಯೆ ೮ ಎಂದು ಹೇಳಿದ್ದೀರಿ. ಆವು ಯಾವುವು, ಯಾವ ಹಂತದಲ್ಲಿದೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ಎ. ಬಿ. ಜಕನೂರ್ (ಸಹಕಾರ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಹೋಮ, ಅರಳೀಕಟ್ಟೆ, ಯಂಗನಹಳ್ಳಿ, ಮಾದಾಪುರ, ಹೆಗತಾರ, ಮಲಿಯನಪುರ, ಹುಂಜನೂರು, ಮಂಗಳ—ಈ ಜಾಗಗಳಲ್ಲಿ ೮ ಗೋಡೌನ್‌ಗಳು ನಿರ್ಮಾಣವಾಗುತ್ತಿವೆ. ಈ ಬಗ್ಗೆ ಕೆಲವರು ಮುಂದೆ ಬಂದಿಲ್ಲ. ಉದಾಹರಣೆಗೆ

† Indicates that remarks or speeches have not been revised by the Member concerned.

ಯಂಗನಹಳ್ಳಿಯವರು ತಮಗೆ ಗೋಡೌನ್ ಇದೆ ಎಂದು ಮಂದೆ ಬಂದಿಲ್ಲ. ಉಳಿದ ಗೋಡೌನ್‌ಗಳಲ್ಲಿ ಕೆಲವು ರೂಫ್ ಲೆವೆಲ್‌ನಲ್ಲಿವೆ, ಕೆಲವು ಬೇಸ್‌ಮೆಂಟ್ ಲೆವೆಲ್‌ನಲ್ಲಿವೆ. ಈ ವರ್ಷ ಎಲ್ಲಾ ಪೂರ್ತಿ ಮಾಡಿಸುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಹುಂಜನೂರು ಸಂಸ್ಥೆಯವರು, ಗೋಡೌನ್ ಕಾರ್ಯ ಪ್ರಾರಂಭ ಮಾಡದೇ ಇರುವುದರಿಂದ ಹಣ ವಾಪಸ್ ಕೊಡಿ ಎಂದು ಹೇಳುತ್ತಿದ್ದಾರೆ. 'ಆ' ಪ್ರಶ್ನೆಗೆ ಉತ್ತರವಾಗಿ ಪೂರ್ಣ ಗೊಳ್ಳದಿರುವ ಉಗ್ರಾಣಗಳನ್ನು ಪೂರ್ಣಗೊಳಿಸಲು ಈ ಸಂಸ್ಥೆಗಳಿಗೆ ನೀರು ಪೂರೈಕೆಯ ಪ್ರದೇಶದ ಅಭಿವೃದ್ಧಿ ಸಂಸ್ಥೆ ಹಾಗೂ ಜಿಲ್ಲಾ ಯೋಜನಾ ಕಾರ್ಯಕ್ರಮಗಳು ಇವುಗಳಿಂದ ಹೆಚ್ಚಿನ ಧನಸಹಾಯ ನೀಡಲಾಗುವುದು ಎಂದು ಹೇಳಿದ್ದೀರಿ. ಯಾವ ಯಾವುದಕ್ಕೆ ಕಾಡಾನಿಂದ ಗ್ಯಾರಂಟ್ಸ್ ಮಂಜೂರು ಮಾಡಿಸಿದ್ದೀರಿ ?

ಶ್ರೀ ಎ. ಜೆ. ಜಕನೂರ್,—ಯಂಗನಹಳ್ಳಿ ಗೋಡೌನ್‌ಗೆ ೧೨೫೦೦ ರೂಪಾಯಿಗಳನ್ನು ಕೊಟ್ಟಿದೆ. ಆದರಂತೆ ಉಳಿದವರೂ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಸಿ. ಬಸಪ್ಪ.—೧೨,೫೦೦ ರೂಪಾಯಿ ಎಂದು ಏನು ಹೇಳುತ್ತೀರಿ, ಆದು ಇಲಾಖೆಯವರು ಕೊಟ್ಟಿಂಥ ಮೂಲಧನ. ಆದರೆ ಕಾಡಾನಿಂದ ಗೋಡೌನ್‌ಗಳಿಗೆ ಎಷ್ಟು ಹಣ ಕೊಡಿಸಿದ್ದೀರಿ?

ಶ್ರೀ ಎ. ಬಿ. ಜಕನೂರ್.—ಹೋಮ್‌ಗಾರ್ಡ್ ೧೦ ಸಾವಿರ ರೂಪಾಯಿ 'ಕಾಡಾ' ನಿಂದ ಮತ್ತು ೨ ಸಾವಿರ ರೂಪಾಯಿ ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಕೊಟ್ಟಿದೆ. ಅರಳೀಕಟ್ಟೆಗೆ ೧೦ ಸಾವಿರ ರೂಪಾಯಿ ಕಾಡಾ ನಿಂದ ಮತ್ತು ೨ ಸಾವಿರ ರೂಪಾಯಿ ಜಿಲ್ಲಾಬ್ಯಾಂಕಿನಿಂದ ಕೊಟ್ಟಿದೆ. ಮಾದಾಪುರಕ್ಕೆ ೨೦ ಸಾವಿರ ರೂಪಾಯಿ ಜಿಲ್ಲಾಬ್ಯಾಂಕಿನಿಂದ ಕೊಟ್ಟಿದೆ. ಹೆಗತಾರ್‌ಗೆ ೨೦ ಸಾವಿರ ರೂಪಾಯಿಗಳನ್ನು ಜಿಲ್ಲಾ ಬ್ಯಾಂಕಿ ನಿಂದ ಕೊಟ್ಟಿದೆ. ಮಲೆಯನಪುರಕ್ಕೆ ೨೦ ಸಾವಿರ ರೂಪಾಯಿಗಳನ್ನು ಜಿಲ್ಲಾ ಬ್ಯಾಂಕಿನಿಂದ ಕೊಟ್ಟಿದೆ. For Hunjanur, we have recommended for sanction.

ಶ್ರೀ ಎಂ. ಸಿ. ಬಸಪ್ಪ.—ಕಳೆದ ವರ್ಷ ಇದೇ ಪ್ರಶ್ನೆ ಕೇಳಿದಾಗಲೂ ಸಹ ೮ ಗೋಡೌನ್‌ಗಳು ಅಪೂರ್ಣವಾಗಿವೆ ಎಂದು ಉತ್ತರ ಕೊಟ್ಟಿದ್ದರು ಈ ವರ್ಷವೂ ಅದೇ ರೀತಿ ಉತ್ತರ ಹೇಳಿದ್ದೀರಿ. ಅಂದರೆ ಕಳೆದ ಒಂದು ವರ್ಷದಿಂದ ಒಂದು ಗೋಡೌನನ್ನೂ ಕಟ್ಟೇ ಇಲ್ಲವೇ ? ಅಥವಾ ಉತ್ತರ ಏನಾದರೂ ತಪ್ಪಾಗಿ ತಿಳಿದುಕೊಂಡು ಕೊಟ್ಟಿದ್ದೀರಾ ? ಹೋದ ವರ್ಷ ೮ ಗೋಡೌನ್ ಪೂರ್ತಿಯಾಗಿಲ್ಲ ಎಂದು ಹೇಳಿದ್ದು ಈ ವರ್ಷವೂ ಅದೇ ಉತ್ತರ ಹೇಳಿದ್ದೀರಿ. ಒಂದು ವರ್ಷದಿಂದ ಯಾವ ಗೋಡೌನನ್ನೂ ಪೂರ್ತಿಗೊಳಿಸುವುದಕ್ಕಾಗಲಿಲ್ಲವೇ ? ಇದರಿಂದ ಲಕ್ಷಾಂತರ ರೂಪಾಯಿ ಸರ್ಕಾರದಿಂದ ಇನ್‌ವೆಸ್ಟ್ ಮಾಡಿರುವ ಹಣ ಪೋಲಾಗುವುದಿಲ್ಲವೇ ?

ಶ್ರೀ ಎ. ಜೆ. ಜಕನೂರ್.—೧೯ ಗೋಡೌನ್‌ಗಳು ಕಂಪ್ಲೀಟ್ ಆಗಿವೆ. ಇನ್ನು ೭ ಗೋಡೌನ್ ಗಳನ್ನು ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದರೂ ಕೂಡ ತೆಗೆದುಕೊಳ್ಳಲಿಲ್ಲ. ಸಿಮೆಂಟ್ ಕೊರತೆಯಿಂದಾಗಿ ತೊಂದರೆಯಾಗಿದೆ. ಈಗ ಎಲ್ಲಾ ವ್ಯವಸ್ಥೆ ಮಾಡಿದ್ದೇವೆ ಸಾಧ್ಯವಾದಷ್ಟು ಬೇಗ ಕೆಲಸ ಪ್ರಾರಂಭ ಮಾಡಿಸುತ್ತೇವೆ. ಮಾನ್ಯ ಸದಸ್ಯರೂ ಸ್ವಲ್ಪ ಆಸಕ್ತಿ ತಾಳಿದರೆ ಬೇಗ ಕೆಲಸ ಮುಗಿಸಬಹುದು.

ಶ್ರೀ ಎಂ. ಸಿ. ಬಸಪ್ಪ.—ಸಿಮೆಂಟ್ ಕೊರತೆ ಇತ್ತು. ಈಗ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಂದರೆ ಏನು ವ್ಯವಸ್ಥೆ ಮಾಡಿದ್ದೀರಿ ? ಸಿಮೆಂಟು ನೇರವಾಗಿ ಸೊಸೈಟಿಗೆ ಮುಟ್ಟುವಂಥ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎ. ಬಿ. ಜಕನೂರ್.—ಸಂಬಂಧಪಟ್ಟ ಇಲಾಖೆಯವರು ಸಿಮೆಂಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಕೊಟ್ಟನಂತರ ಸೊಸೈಟಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿಸುತ್ತೇವೆ.

Matka in Shahabad, Wadi and Gulbarga

337 SRI S. F. BHAIRY (Shahabad) and SRI B. V. KAKKILAYA (Vittal).—Will the Chief Minister be pleased to state :—

(a) whether it has come to the notice of the Government that 'Matka' and 'Talab Jahari' gamblings are going on rampantly at places like Shahabad, Wadi and Gulbarga ;